ಮಂಡಳಿಯವರು, ಮುಖ್ಯಮಂತ್ರಿಗಳಿಗೆ ಮತ್ತು ಹಣಕಾಸಿನ ಮಂತ್ರಿಗಳಿಗೆ ಒತ್ತಾಯ ಮಾಡಿ ಈ ವರ್ಷದ ಬಡ್ಜೆಟ್‌ನಲ್ಲಿ 45 ಕೋಟಿ ರೂಪಾಯಿಗಳನ್ನು ಸ್ಟೂಡೆಂಟ್ಸ್ ಕನ್ಸೆಷನ್ ಸಂಬಂಧದಲ್ಲಿ ಕೊಡಬೇಕು ಎಂದು ಒತ್ತಾಯ ಮಾಡಿದ ಮೇರೆಗೆ ಈ 45 ಕೋಟಿ ಹಣವನ್ನು ಕೊಡಲು ಸರ್ಕಾರ ನಿರ್ಧಾರ ಮಾಡಿದೆ. ಪತ್ರಕರ್ತರಿಗೆ ಕೊಡುತ್ತಿರುವ ಪಾಸ್‌ಗಳ ಬಾಬ್ತು ಸುಮಾರು ನಾಲ್ಕುವರೆ ಲಕ್ಷ ರೂಪಾಯಿ ಖರ್ಚು ಆಗುತ್ತಿದೆ. ಆ ಹಣವನ್ನು ಸರ್ಕಾರದವರೇ ಸಂಪೂರ್ಣವಾಗಿ ಸಾರಿಗೆ ಸಂಸ್ಥೆಯವರಿಗೆ ಕೊಡುತ್ತಾ ಇದ್ದಾರೆ. ಇದರ ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುತ್ತಾ ಇರತಕ್ಕಂಥ ಪಾಸ್‌ಗಳ ಬಾಬತ್ತಿನ ಹಣವನ್ನೂ ಸಹ ಸರ್ಕಾರವೇ ಕೊಡುತ್ತಾ ಇದೆಯೇ ಹೊರತು ಬಾಕಿ ಎಲ್ಲಾ ಖರ್ಚನ್ನು ಸಹ ಸರ್ಕಾರವೇ ಕೊಡುತ್ತಾ ಇದೆ. ಸಾರಿಗೆ ಸಂಸ್ಥೆಯ ಮೇಲೆ ಇದು ಬರ್ಡನ್ ಆಗುತ್ತಿದೆಯೆಂದು ತಾವು ಹೇಳುತ್ತಿದ್ದೀರಿ. ಅದು ಸರಿಯಲ್ಲ. ಈ ವರ್ಷದಲ್ಲಿ 105 ಕೋಟಿ ರೂಪಾಯಿ ಸಾರಿಗೆ ಸಂಸ್ಥೆಯವರಿಗೆ ಹೊರೆಯಾಗುವುದರಲ್ಲಿ50 ಪರ್ಸೆಂಟ್ ಗಿಂತ ಹೆಚ್ಚು ಹಣವನ್ನು ಕೆಎಸ್‌ಆರ್‌ಟಿಸಿಗೆ ಸರ್ಕಾರ ಕೊಡುತ್ತದೆ. ಇನ್ನು ಉಳಿದ50 ಪರ್ಸೆಂಟ್ ಬರ್ಡನ್‌ನ್ನು ಅವರೇ ಬೇರ್ ಮಾಡಬೇಕಾಗುತ್ತದೆಂದು ಸರ್ಕಾರದ ನಿರ್ಧಾರವಾಗಿದೆ. ಇದರಿಂದ ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತದೆಂದು ನಾನು ತತ್ವಶಃ ಒಪ್ಪುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಪುಷ್ಪಕ್ ಬಸ್ಸಿನಲ್ಲಿ ಓಡಾಡುವುದಕ್ಕೆ ಪಾಸ್ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪತ್ರಕರ್ತರಿಗೆ ವಿಶೇಷವಾಗಿ ಕೊಡುತ್ತಿರುವ ಪಾಸ್‌ಗಳ ಹಣವನ್ನು ಸರ್ಕಾರವೇ ವಾರ್ತಾ ಮತ್ತು ಪ್ರಸಾರ ಇಲಾಖೆ ಮೂಲಕ ರಸ್ತೆ ಸಾರಿಗೆ ಸಂಸ್ಥೆಗೆ ಕೊಟ್ಟು ಬಿಡುತ್ತಿದೆ. ಇದರ ಬಗ್ಗೆ ವಾರ್ತಾ ಇಲಾಖೆಯವರು ಕೊಡುವುದಕ್ಕೆ ಒಪ್ಪಿಕೊಂಡರೆ ಸಾರಿಗೆ ಸಂಸ್ಥೆಯವರಿಗೆ ಹೇಳಿ ಮಾಡಿಸಬಹುದು. ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಬದಾಮಿ ತಾಲ್ಲೂಕಿನಲ್ಲಿ ತೋಟಗಾರಿಕೆ ಅಭಿವೃದ್ಧಿ

581 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕಿನಲ್ಲಿ ಭೂಮಿ ನೀರು, ತೋಟಗಾರಿಕೆ ಬೆಳೆಗೆ ಯೋಗ್ಯವಾಗಿದ್ದರೂ, ಹಿಂದುಳಿದಿರುವಿಕೆಗೆ ಕಾರಣಗಳೇನು?

ಆ) ಸರ್ಕಾರವು ತೋಟಗಾರಿಕೆ ಅಭಿವೃದ್ಧಿಗೆ ಹಾಗೂ ಸಂಸ್ಕರಣ ಮಾರಾಟಕ್ಕೆ ಉತ್ತೇಜನ ಕೊಟ್ಟು ಪ್ರೋತ್ಸಾಹಿಸುತ್ತಿದೆಯೇ?

ಇ) ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳ ಮೂಲಕ ಪ್ರೋತ್ಸಾಹ ನೀಡಲಾಗುವುದು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಈ ಹಿಂದೆ ಈ ತಾಲ್ಲೂಕಿನಲ್ಲಿ ರೈತರು, ಹೆಚ್ಚಿನ ಸಂಖ್ಯೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಮುಂದೆ ಬರುತ್ತಿರಲಿಲ್ಲ. ತೋಟಗಾರಿಕೆಗೆ ಹೆಚ್ಚಿನ ಬಂಡವಾಳ ಹಾಗೂ ತಾಂತ್ರಿಕ ಜ್ಞಾನ ಅಗತ್ಯವಿರುವ ಕಾರಣ ಈ ಕೊರತೆಗಳಿಂದಲೂ ಕೆಲಮಟ್ಟಿಗೆ ಈ ಭಾಗದಲ್ಲಿ ತೋಟಗಾರಿಕೆ ಅಷ್ಟೊಂದು ಹೆಚ್ಚಲಿಲ್ಲ. ಆದರೆ ಈಗ ಈ ಪರಿಸ್ಥಿತಿ ಇಲ್ಲ. ಹಾಗೂ ರೈತರು ಹೆಚ್ಚಿನ ಸಂಖ್ಯೆಯಲ್ಲಿ ತೋಟಗಾರಿಕೆಯಲ್ಲಿ ತೊಡುಗುತ್ತಿದ್ದಾರೆ. ಇದ್ಕಕೆ ತೋಟಗಾರಿಕೆ ಇಲಾಖೆ, ಬ್ಯಾಂಕ್‌ಗಳು ಹಾಗೂ ಇತರ ಸಂಘ ಸಂಸ್ಥೆಗಳು ನೆರವಾಗುತ್ತವೆ.

ಆ) ಹೌದು. ಈಗಾಗಲೇ ಪ್ರೋತ್ಸಾಹಿಸುತ್ತಿದೆ.

ಇ) ಈ ಭಾಗದಲ್ಲಿ ತೋಟಗಾರಿಕೆಯ ಸರ್ವತೋಮುಖ ಅಭಿವೃದ್ಧಿಗೆ ರಾಜ್ಯ ತೋಟಗಾರಿಕೆ ಇಲಾಖೆ, ಭಾರತ ಸರ್ಕಾರ ಹಾಗೂ ಇತರ ಸಂಘಟನೆಗಳು ಅನೇಕ ಯೋಜನೆ/ಕಾರ್ಯಕ್ರಮಗಳನ್ನು

ಅನುಬಂಧ - 1

ಬಿಜಾಪುರ ಜಿಲ್ಲೆ ಬಾದಾಮಿ, ತಾಲ್ಲೂಕಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆ/ಕಾರ್ಯಕ್ರಮಗಳ ವಿವರಗಳು (1997-98)

ಅ.ಕ್ರ ಸಂಖ್ಯೆ	ಯೋಜನೇತರ/ ಕಾರ್ಯಕ್ರಮದ ಹೆಸರು	ಮಂಜೂರಾದ ಅನುದಾನ (ಲಕ್ಷಗಳಲ್ಲಿ)	ಕಾರ್ಯಕ್ರಮದ ವಿವರ
1	2	3	4
1.	**ಜಿಲ್ಲಾ ಪಂಚಾಯತ್ ಯೋಜನೆಗಳು :**		
	1. ಬೀಜದ ತೆಂಗಿನ ಕಾಯಿಗಳ ಸಂಗ್ರಹಣೆ ಮತ್ತು ವಿತರಣೆ	0.30	ತೆಂಗಿನ ಸಸಿಗಳನ್ನು ಅಭಿವೃದ್ಧಿ ಪಡಿಸಿ ಸರ್ಕಾರದ ನಿಗದಿತ ದರದಲ್ಲಿ ಮಾರಾಟ
	2. ತರಕಾರಿ ಪ್ರಾತ್ಯಕ್ಷತೆಗಳು	0.46	ತರಕಾರಿ ಪ್ರಾತ್ಯಕ್ಷತೆಗಳನ್ನು ಕೈಗೊಳ್ಳಲು ಬೀಜ, ರಸಗೊಬ್ಬರ ಕೀಟನಾಶಕಗಳನ್ನು ಒದಗಿಸುವುದು.
	3. ಪ್ರಚಾರ ಮತ್ತು ಸಾಹಿತ್ಯ	0.045	ತೋಟಗಾರಿಕೆ ಬೆಳೆಗಳ ಮಾಹಿತಿಯ ತಾಂತ್ರಿಕ ಕೈಪಿಡಿಯನ್ನು ರೈತರಿಗೆ ವಿತರಿಸುವುದು.
	4. ರೈತರ ಪ್ರವಾಸ	0.34	ರೈತರನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯುವುದು.
	5. ಅಣಬೆ ತರಬೇತಿ	0.045	ತಾಲ್ಲೂಕಿನಲ್ಲಿ ರೈತ ಹಾಗೂ ರೈತ ಮಹಿಳೆಯರಿಗೆ ಅಣಬೆ ತರಬೇತಿ ನೀಡಲಾಗುವುದು
	6. ಅಲಂಕಾರಿಕ ಸಸಿಗಳ ಅಭಿವೃದ್ಧಿ ಕಾರ್ಯಕ್ರಮ	0.055	ತಾಲ್ಲೂಕಿನ ಸರ್ಕಾರಿ ಕಛೇರಿಗಳು, ಹಾಗೂ ಅತಿಥಿಗೃಹಗಳ ಮುಂದಿಡಲು ಅಲಂಕಾರಿಕ ಸಸಿಗಳ ಪೂರೈಕೆ.

1	2	3	4
7.	ಕೃಷಿ ಕ್ಷೇತ್ರ ಮೂಲ ಭೂತ ಸೌಕರ್ಯ ಕಲ್ಪಿಸುವುದು	0.60	ತಾಲ್ಲೂಕಿನ ತೋಟಗಾರಿಕೆ ಕ್ಷೇತ್ರ (ಬನಶಂಕರಿ)ದಲ್ಲಿ ಪಂಪ್‌ಸೆಟ್ ಅಳವಡಿಸುವುದು ಹಾಗೂ ನೀರಾವರಿ ಪೈಪ್‌ಲೈನ್ ಜೋಡನೆ.
8.	ಮಂಡಳ ನರ್ಸರಿಗಳ ಅಭಿವೃದ್ಧಿ	0.10	ಬನಶಂಕರಿ ತೋಟಗಾರಿಕೆ ಕ್ಷೇತ್ರದಲ್ಲಿ ವಿವಿಧ ಹಣ್ಣುಮಿನ ಗಿಡಗಳ ಉಸ್ತುವಾರಿ ಮತ್ತು ಪಾಲನೆ.
9.	ಸಸ್ಯಾಭೀವೃದ್ಧಿ/ಸಸಿ/ಕಸಿಗಳ ವಿತರಣೆ	0.20	ತೋಟಗಾರಿಕೆ ಕ್ಷೇತ್ರದಲ್ಲಿ ವಿವಿಧ ಹಣ್ಣಿನ ಗಿಡಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸುವುದು.
10.	ಸಾಮಾಜಿಕ ತೋಟಗಾರಿಕೆ	0.09	ಹಿತ್ತಲ ತೋಟಗಳಳ ಕ್ಷೇತ್ರದಲ್ಲಿ ಅಭಿವೃದ್ಧಿ ಫಲಾನುಭವಿಗಳ ಹಣ್ಣಿನ ಗಿಡಗಳ ವಿತರಣೆ.
11.	ಶೇ.50ರ ರಿಯಾಯಿತಿ ದರದಲ್ಲಿ ಕ್ರಿಮಿನಾಶಕ ವಿತರಣೆ	0.50	ರೈತರಿಗೆ ಶೇ.50ರ ರಿಯಾಯತಿ ದರದಲ್ಲಿ ಸಸ್ಯ ಸಂರಕ್ಷಣೆ ಔಷಧಿಯ ವಿತರಣೆ.
12.	ಸಸ್ಯ ಸಂರಕ್ಷಣಎ ಪ್ರಯೋಗಾಲಯ	1.50	ತಾಲ್ಲೂಕಿನಲ್ಲಿ ಪರೋಪಜೀವಿ ಪ್ರಯೋಗಾಲಯ ಸ್ಥಾಪನೆ
13.	ವಿಶೇಷ ಘಟಕ ಯೋಜನೆ	0.302	ಪರಿಶಿಷ್ಟ ಜಾತಿ ರೈತರ ವಿವಿಧ ರೈತರ ಹಣ್ಣಿನ ತೋಟಗಳ ನಿರ್ಮಾಣ ಮತ್ತು ಉಸ್ತುವಾರಿ
14.	ಗಿರಿಜನ ಅಭಿವೃದ್ಧಿ ಯೋಜನೆ	0.138	ಗಿರಿಜನ ರೈತರಿಗೆ ಹಣ್ಣಿನ ತೋಟಗಳ ನಿರ್ಮಾಣ ಕೈಗೊಳ್ಳುವುದು.
15.	ವಿಶೇಷ ಘಟಕ ಯೋಜನೆ	0.465	ಪರಿಶಿಷ್ಟ ಜಾತಿಯ ರೈತರಿಗೆ ವಿವಿಧ ತರಕಾರಿ ತಾಕುಗಳ ನಿರ್ಮಾಣ, ಬೀಜ, ಗೊಬ್ಬರ, ಕ್ರಿಮಿನಾಶಕ ಪೂರೈಕೆ.

1	2	3	4
16.	ಗಿರಿಜನ ಅಭಿವೃದ್ಧಿ ಯೋಜನೆ (ಕೇಂದ್ರ ಅನುಧಾನ)	0.225	ಗಿರಿಜನ ರೈತ ಫಲಾನುಭವಿಗಳಿಗೆ ತರಕಾರಿ ತಾಕುಗಳ ನಿರ್ಮಾಣ ಬೀಜ ರಸಗೊಬ್ಬರ ವಿತರಣೆ ಕೇಂದ್ರ ಪುರಸ್ಕೃತ ಯೋಜನೆಗಳು
17.	ಸಮಗ್ರ ಸಾಂಬಾರು ಬೆಳಎ ಯೋಜನೆ	0.4315	ಕೊತ್ತಂಬರಿ ಹಾಗೂ ಮೆಣಸಿನ ಕಾಯಿ ಬೆಳೆಗಳನ್ನು ಅಭಿವೃದ್ಧಿ ಪಡಿಸುವುದು
18.	ಹನಿ ನೀರಾವರಿ ಯೋಜನೆ	58.00	ಹನಿ ನೀರಾವರಿ ಪದ್ಧತಿ ಅಳವಡಿಸಲು ಸಹಾಯ ಧನ ಒದಗಿಸುವುದು
19.	ಗಿರಿಜನ ಅಭಿವೃದ್ಧಿ ಯೋಜನೆ	0.25	ಗಿರಿಜನ ರೈತ ಫಲಾನುಭವಿಗಾಗಿ ವಿವಿಧ ಹಣ್ಣಿನ ತೋಟಗಳ ನಿರ್ಮಾಣ ಕೈಗೊಳ್ಳುವುದು
20.	ವಿಶೇಷ ಘಟಕ ಯೋಜನೆ	0.3927	ಪರಿಶಿಷ್ಟ ಜಾತಿಗಳ ರೈತರಿಗೆ ವಿವಿಧ ಹಣ್ಣಿನ ತೋಟಗಳ ನಿರ್ಮಾಣ
21.	ಉಷ್ಣ ವಲಯ ಪ್ರದೇಶದಲ್ಲಿ ಹಣ್ಣಿನ ಬೆಳೆಗಳ ಅಭಿವೃದ್ಧಿ	0.767	ದ್ರಾಕ್ಷಿ, ಬಾಳೆ ಕ್ಷೇತ್ರಗಳ ವಿಸ್ತರಣೆ ಹಾಗೂ ಲಿಂಬೆ, ಮಾವಲು, ಪೇರಲ ಹಣ್ಣಿನ ತೋಟಗಳ ಪುನಶ್ಚೇತನ.
22.	ಉದ್ಯೋಗ ಭರವಸೆ ಯೋಜನೆ	1.56228	ಮಾವು, ಚಿಕ್ಕು, ದಾಳಿಂಬೆ, ಲಿಂಬೆ, ತೆಂಗು ಬೆಳೆಗಳನ್ನು ಅಭಿವೃದ್ಧಿ ಪಡಿಸುವುದು.

ಶ್ರೀ ಬಿ.ಬಿ. ಚಿಮ್ಮನ್ನಕಟ್ಟಿ : ಮಾನ್ಯ ಅಧ್ಯಕ್ಷರೆ, ಈ ಬಾದಾಮಿ ತಾಲ್ಲೂಕಿನ ತೋಟಗಾರಿಕೆ ಅಭಿವೃದ್ಧಿಯ ಸಲುವಾಗಿ ನಾನು ಪ್ರಶ್ನೆ ಕೇಳಿದ್ದೇನೆ. ಆದರೆ ಅನೇಕ ಕಾರಣಗಳನ್ನು ಮಾನ್ಯ ಮಂತ್ರಿಯವರು ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ ಹೇಳುವುದೇನೆಂದರೆ ನಮ್ಮ ಬಾದಾಮಿ ತಾಲ್ಲೂಕಿನ ತೋಟಗಾರಿಕಾ ಕಛೇರಿಗೆ ಸಾಕಷ್ಟು ಜನ ಅಧಿಕಾರಿಗಳನ್ನು ಪೋಸ್ಟ್ ಮಾಡಿಲ್ಲ. ಹೀಗೆ ಖಾಲಿ ಇರುವ ಹುದ್ದೆಗಳಿಗೆ ಯಾವಾಗ ಪೋಸ್ಟ್ ಮಾಡುತ್ತೀರಾ? ಸರ್ಕಾರಿ ಅಧಿಕಾರಿಗಳು ಇಲ್ಲದೆ ಬಹಳ ವರ್ಷಗಳಿಂದ ಈ ಇಲಾಖೆ ನರಳುತ್ತಿದೆ. ಇದರಿಂದ ಅಭಿವೃದ್ಧಿಯೂ ಆಗುತ್ತಾ ಇಲ್ಲ. ಮುಖ್ಯ ತೋಟದ ಬೇಳೆಗಳಾದ ದ್ರಾಕ್ಷಿ, ದಾಳಿಂಬೆ, ಮಾವು ನಮ್ಮಲ್ಲಿ ಹೆಚ್ಚು ಬೆಳೆಯುತ್ತೇವೆ. ಕೃಷಿಯನ್ನೇ ಅವಲಂಬಿತರಾಗಿರುವಂತಹ ರೈತರಿಗೆ ಇಲಾಖೆಯ ಮುಖಾಂತರವಾಗಿ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಈ ತಾಲ್ಲೂಕಿನಲ್ಲಿ ಎಷ್ಟು ಕ್ಷೇತ್ರದಲ್ಲಿ ಈ ಬೆಳೆಗಳನ್ನು ಬೆಳೆಯುಲಾಗುತ್ತಿದೆಂದು ಮಾನ್ಯ ಮಂತ್ರಿಯವರು ತಿಳಿಸಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಬಾದಾಮಿ ತಾಲ್ಲೂಕು ಬಿಜಾಪುರ ಜಿಲ್ಲೆಯಲ್ಲಿ ಬರುತ್ತದೆ. ಉತ್ತರ ಕರ್ನಾಟಕಕ್ಕೆ ಯಾವುದೇ ಅಧಿಕಾರಿಗಳನ್ನು ಅಲ್ಲಿಗೆ ನಿಯೋಜನೆ ಮಾಡಿದರೂ ಯಾರು ಹೋಗುವುದಿಲ್ಲ. ಬಲವಂತವಾಗಿ ನಾವು ಕಳುಹಿಸಿದರೆ ಅವರು ರಜಾ ಹಾಕಿ ಕೆಲಸಕ್ಕೆ ಬರುವುದಿಲ್ಲ. ಬರಿ ಆಶಿಸ್ತಿನಿಂದ ನಡೆದುಕೊಳ್ಳುತ್ತಾರೆ. ಇಲ್ಲವೆಂದರೆ ಒಂದಲ್ಲ ಒಂದು ಕಡೆ ಬದಲಾವಣೆ ಮಾಡಿಸಿಕೊಂಡು ಹೋಗುತ್ತಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಟ್ರಾನ್ಸ್‌ಫರ್ ಮಾಡುವಂತಹ ಸಂದರ್ಭದಲ್ಲಿ ಆಯಾಯ ಜಿಲ್ಲೆಗೆ ಸೇರಿದ ಅಧಿಕಾರಿಗಳನ್ನೇ ಆದ್ಯತೆಯ ಮೇಲೆ ಹಾಕಲು ಸರ್ಕಾರ ಯೋಚನೆ ಮಾಡುತ್ತಾ ಇದೆ. ಯಾವುದೇ ಒಬ್ಬ ಅಧಿಕಾರಿಯನ್ನು ಆ ಭಾಗಕ್ಕೆ ಹಾಕಿದರೆ ಒಂದಲ್ಲ ಒಂದು ನೆಪ ಹೇಳಿ ಅಥವಾ ಆರೋಗ್ಯ ಸರಿಯಿಲ್ಲ ಎಂದೋ ಅಥವಾ ಇನ್ಯಾವುದೋ ಕಾರಣ ಹೇಳಿ ಅಥವಾ ಇನ್‌ಫ್ಲೂಯೆನ್ಸ್ ಮಾಡಿಸಿಕೊಂಡು ಒಂದು, ಒಂದೂವರೆ ತಿಂಗಳಲ್ಲಿ ಬೇರೆ ಕಡೆಗೆ ವಾಪಸ್ಸು ಹೊರಟು ಹೋಗುತ್ತಾರೆ. ಹೀಗಾಗಿ ಉತ್ತರ ಕರ್ನಾಟಕದಲ್ಲಿ ಯಾವುದೇ ಒಬ್ಬ ಅಧಿಕಾರಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿ ಲೋಪದೋಷ ಇದೆ. ಅದನ್ನು ಸರಿಪಡಿಸುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಇಡೀ ಬಿಜಾಪುರ ಜಿಲ್ಲೆ ಇವತ್ತು ತೋಟಗಾರಿಕೆ ಬೆಳೆಯಲ್ಲಿ ಪ್ರಥಮ ಸ್ಥಾನದಲ್ಲಿ ಬರುತ್ತಿದೆ. ವಿಶೇಷವಾಗಿ ಬಾಗಲಕೋಟೆ ಮತ್ತು ಬಿಜಾಪುರ. ಈಗ ಬಾಗಲಕೋಟೆಗೆ ಬಂದಿರಬಹುದು. ಮೊದಲು ಬಿಜಾಪುರ ಇತ್ತು. ಈಗ ಬಾಗಲಕೋಟೆ ಬಂದರೆ ಬಾಗಲಕೋಟೆಯೂ ಕೂಡ ಅಂದರೆ ಬಾದಾಮಿ ತಾಲ್ಲೂಕಿನಲ್ಲೂ ಕೂಡ ಉತ್ತಮವಾದಂಥ ನೆಲ ಮತ್ತು ನೀರು ಎಲ್ಲಾ ಇದೆ. ಆದರೆ ಹೆಚ್ಚಿನ ರೈತರು ಮುಂದೆ ಬರುತ್ತಾ ಇರಲಿಲ್ಲ. ಈಗ ಸುಮಾರು ಬಾದಾಮಿ ತಾಲ್ಲೂಕಿನಲ್ಲಿ 3924 ಹೆಕ್ಟೇರ್‌ನಲ್ಲಿ ಈಗ ತೋಟಗಾರಿಕಾ ಬೆಳೆಗಳ ಉತ್ಪಾದನೆ ನಡೆಯುತ್ತಿದೆ. ಅದರಲ್ಲಿ ಸುಮಾರು ಯೋಜನೆಗಳಿವೆ. ಬದಾಮಿ ತಾಲ್ಲೂಕಿನಲ್ಲಿ ಈ ಸಾರಿ 1997-98ನೇ ಸಾಲಿಗೆ ಇದನ್ನು ಉತ್ತೇಜನ ಮಾಡಬೇಕೆನ್ನುವ ಕಾರಣಕ್ಕೋಸ್ಕರ ಉದ್ಯೋಗ ಭರವಸೆ ಯೋಜನೆಯಲ್ಲಿ 1-2 ಎಕರೆ ಜಮೀನು ಇರುವಂಥ 50 ಜನರಿಗೆ ಮಾವು, ಇನ್ನಿತರೆ ಡ್ರೈ ಲ್ಯಾಂಡ್ ಕ್ರಾಪ್ಸ್‌ಗಳನ್ನು ಕೊಡಲಿಕ್ಕೆ, ಉಷ್ಣ ವಲಯ ಯೋಜನೆಯಲ್ಲಿ 25 ಜನ ರೈತರಿಗೆ, ಹನಿನೀರಾವರಿ ಯೋಜನೆಯಲ್ಲಿ50 ಜನ ರೈತರಿಗೆ ಮತ್ತು ಗಿರಿಜನ ಯೋಜನೆಯಲ್ಲಿ15 ಜನ ರೈತರಿಗೆ, ವಿಶೇಷ ಘಟಕ ಯೋಜನೆಯಲ್ಲಿ 31 ಜನ ರೈತರಿಗೆ, ಗಿರಿಜನ ಉಪಯೋಜನೆಯಲ್ಲಿ 10 ಜನರಿಗೆ,

ವಿಶೇಷ ಘಟಕ ಯೋಜನೆಯಲ್ಲಿ 20 ಜನ ರೈತರಿಗೆ ಮತ್ತು ಐವತ್ತು ಪರ್ಸೆಂಟ್ ದರದಲ್ಲಿ ಕ್ರಿಮಿನಾಶಕ 500 ಜನ ರೈತರಿಗೆ, ಅಣಬೆ ತರಬೇತಿ 95 ಜನ ರೈತರಿಗೆ, ರೈತರ ಪ್ರವಾಸ 45 ಜನರಿಗೆ ಮತ್ತು ಸರ್ಕಾರಿ ಪ್ರೊಡಕ್ಷನ್ ಸೆಂಟರ್ 25 ಒಟ್ಟು 859 ಫಲಾನುಭವಿಗಳಿಗೆ ಈಗಾಗಲೇ ತೋಟಗಾರಿಕಾ ಇಲಾಖೆಯಿಂದ ಉತ್ತೇಜನ ಕೊಡಬೇಕೆಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಅದೂ ಕೂಡ ಬೆಳೆಯಲಿಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಈಗ ಬಾದಾಮಿ ತಾಲ್ಲೂಕಿನಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದಕ್ಕೆ ಬಹಳ ಒಳ್ಳೆಯ ಭೂಮಿ ನೀರು ಇದೆ, ಅದಕ್ಕೆ ಪ್ರೋತ್ಸಾಹ ಆಗುವ ರೀತಿಯೊಳಗೆ ಒಂದು ಹಾರ್ಟಿಕಲ್ಚರ್ ಫಾರಂ ಅನ್ನು ಸರ್ಕಾರದ ವತಿಯಿಂದ ತೆಗೆಯುವುದಕ್ಕೆ ಸಾಧ್ಯವೇ? ಅದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರೋ?

ಶ್ರೀ ಡಿ.ಟಿ. ಜಯಕುಮಾರ್ : ಸರ್ಕಾರಿ ಜಮೀನು ಇದ್ದರೆ ಅದನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ನಾವು ಜಮೀನನ್ನು ಕೊಡಿಸುತ್ತೇವೆ.

ಮುದ್ರಾಂಕ ಶುಲ್ಕದಿಂದ ಆದಾಯ

582 - ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಿಂದ ರಚಿಸಲ್ಪಟ್ಟ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯ ನಿರ್ಧರಣಾ ಸಮಿತಿಗಳು ವರದಿ ಸಲ್ಲಿಸುವುದಕ್ಕಿಂತ ಮೊದಲು ಹಾಗೂ ನಂತರ ರಾಜ್ಯದ ಬೊಕ್ಕಸಕ್ಕೆ ನೋಂದಣಿಯಿಂದ ಸಂದಾಯವಾದ ಒಟ್ಟು ಮುದ್ರಾಂಕ ಶುಲ್ಕದ ಆದಾಯ?

ಆ) ಸಮಿತಿಯು ಸಲ್ಲಿಸಿದ ವರದಿಯನ್ನು ಸರ್ಕಾರದಿಂದ ಮರು-ಪರಿಗಣಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) 1996-97ನೇ ಸಾಲಿನಲ್ಲಿ ಬೆಂಗಳೂರು ನಗರದ ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ, ಯಲಹಂಕ, ಆನೇಕಲ್, ಕೆ.ಆರ್. ಪುರಂ ಉಪ-ನೋಂದಣಿ ಕಛೇರಿಗಳಿಗೆ ಸಂಬಂಧಿಸಿದಂತೆ ದಿನಾಂಕ : 19-11-96ರಿಂದ ಜಾರಿಗೆ ಬರುವಂತೆ ದಿನಾಂಕ: 13-11-96ರಂದು ಸರ್ಕಾರದ ಅಧಿಸೂಚನೆ ಸಂ. ಆರ್‌ಡಿ 480 ಮುನೋಮು 95 ಹಾಗೂ ಬೆಂಗಳೂರು ನಗರದ ಇನ್ನುಳಿದ ಉಪ-ನೋಂದಣಿ ಕಛೇರಿಗಳಾದ ಗಾಂಧಿನಗರ, ಶಿವಾಜಿನಗರ, ರಾಜಾಜಿನಗರ, ಜಯನಗರ, ಬಸವನಗುಡಿ, ಶ್ರೀರಾಮಪುರಂಗಳಿಗೆ ಸಂಬಂಧಿಸಿದಂತೆ ದಿನಾಂಕ : 18-2-97ರಿಂದ ಜಾರಿಗೆ ಬರುವಂತೆ ದಿನಾಂಕ : 20-1-97ರಂದು ಸರ್ಕಾರದ ಅಧಿಸೂಚನೆ